# ೧ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## ಸಿ.ಸಿ. 398/2023

ಸಾಕ್ಷಿದಾರರ ಹೇಳಿಕೆ ಃ

| | | |
|---|---|---|
| ಹೆಸರು | ಃ ತುಳಸಿ | ಚಾಸಾಃ **3** ಪ್ರಾಸಾಃ **3** |
| ಗಂಡನ ಹೆಸರು | ಃ ಅಶೋಕ್ | |
| ವಯಸ್ಸು | ಃ 34 ವರ್ಷ | |
| ವೃತ್ತಿ | ಃ ಗೃಹಿಣಿ | |
| ವಾಸಸ್ಥಳ | ಃ ಹಿರೇಮರಳಿ ಗ್ರಾಮ | |

ದಿನಾಂಕಃ **22.09.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01**. ಆರೋಪಿ ನನಗೆ ಗೊತ್ತಿಲ್ಲ. ಆತನನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಮೃತ ವೆಂಕಟೇಗೌಡ ನನ್ನ ಸಂಬಂದಿಕರು. ಅವರು ಆಪಘಾತದಲ್ಲಿ ತೀರಿಕೊಂಡಿದ್ದಾರೆ. ಅಪಘಾತವು ಹೇಗೆ, ಯಾವ ರೀತಿ ಹಾಗೂ ಯಾರ ನಿರ್ಲಕ್ಷ್ಯತನದಿಂದ ಉಂಟಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(**ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.**)**

ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ

**01**. ದಿನಾಂಕಃ 29.01.2023 ರಂದು ಚಾ.ಸಾ-1 ರವರ ಆಟೋದಲ್ಲಿ ನಾನು, ಚಾ,ಸಾ-2 ಮತ್ತು ಅವರ ಗಂಡ ಗವಿರಂಗನಾಥಸ್ವಾಮಿ ದೇವಸ್ಥಾನಕ್ಕೆ ಹೋಗಿದ್ದು, ವಾಪಸ್ಸು ಬರುವಾಗ ಶ್ರವಣ ಬೆಳಗೋಳ ಮೇಲುಕೋಟೆ ರಸ್ತೆಯ ಎಡಬದಿಯಲ್ಲಿ ಆಟೋದ ಹಿಂದಿನಿಂದ ಕೆ.ಎ. 09 ಎಂ.ಹೆಚ್. 0619 ನ ಚಾಲಕ ಕಾರನ್ನು ಅತಿವೇಗ ಮತ್ತು ಆಜಾಕರುಕತೆಯಿಂದು ಓಡಿಸಿಕೊಂಡು ಬಂದು ನಮ್ಮ ಆಟೋಗೆ ಗುದ್ದಿದ ಎಂದರೆ ಸರಿಯಲ್ಲ. ಆಗ ಆಟೋ ಉರುಳಿ ಬಿದ್ದು ವೆಂಕಟೇಗೌಡರ ಬಲಗೈ ಮತ್ತು ಇತರೆ ಕಡೆ, ಚಾ.ಸಾ-1 ಮತ್ತು 2 ರವರಿಗೆ, ನಮಗೆ ಪೆಟ್ಟು ಗಾಯಗಳಾಯಿತು ಎಂದರೆ ಸರಿಯಲ್ಲ. ಕಾರಿನ ಚಾಲಕ ಕಾರನ್ನು ನಿಲ್ಲಿಸದೆ ಹೊರಟು ಹೋದ ಎಂದರೆ ಸರಿಯಲ್ಲ. ವೆಂಕಟೇಗೌಡರನ್ನು ಅಂಬ್ಯೂಲೆನ್ಸ್ ನಲ್ಲಿ ಪಾಂಡವಪುರ ಆಸ್ಪತ್ರೆಗೆ ಕಳುಹಿಸಿಕೊಟ್ಟೆ ಎಂದರೆ ಸರಿ. ಅಲ್ಲಿ ವೈದ್ಯರು ಮೃತ ಪಟ್ಟಿರುವುದಾಗಿ ತಿಳಿಸಿಲದರು ಎಂದರೆ ಸರಿ. ಈ ಸಂಬಂದ ಕಾರಿನ ಚಾಲಕನ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**2**. ದಿಃ30.01.2023 ರಂದು ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-**12** ಎಂದು ಗುರುತಿಸಲಾಯಿತು. ಈಗ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಏನು ಇಲ್ಲ ಎಂದು ತಿಳಿಸಿರುತ್ತಾರೆ.
(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

**C/C 1** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.